# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\9627\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 07/01/2020

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** ಸರ್ಕಾರಿ ನೌಕರರಾದ ಹಾವೇರಿ ಜಿಲ್ಲೆ ಹಿರೇಕೆರೂರ ತಾಲ್ಲೂಕ್ ಕಚವಿ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ 1)ಶ್ರೀ.ಎಫ್.ಎಂ.ಮಾಳಗಿಮನಿ ಮತ್ತು 2) ಶ್ರೀ.ಸಿ.ಆರ್.ಪೂಜಾರ್ [ಪ್ರಸ್ತುತ ನಿವೃತ್ತ], ಅಧ್ಯಕ್ಷರುಗಳಾಗಿದ್ದ 3) ಶ್ರೀಮತಿ.ನಾಗವೇಣಿ ಬಿ ಮಡಿವಾಳರ, 4)ಶ್ರೀ.ಶಂಭುಲಿಂಗಪ್ಪ ಎಂ ಬ್ಯಾಗವಾದಿ, 5)ಶ್ರೀ.ಹೊಳಬಸಪ್ಪ ಎನ್ ಮಳವಳ್ಳಿ ಮತ್ತು 6) ಶ್ರೀ.ಚಂದ್ರೇಗೌಡ ಸಿ ಹಳ್ಳೂರು ರವರುಗಳ ದುರ್ನಡತೆಯ ಬಗ್ಗೆ.

**********

ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕ್ ಮಾಸೂರು ನಿವಾಸಿಯಾದ ಶ್ರೀ.ಮೋಹನ ದುಂಡಪ್ಪ ನನ್ನೂರಿ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು 1) ಬೆಂಗಳೂರು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಶ್ರೀ.ಕೆ.ಬಿ.ಅಂಜನಪ್ಪ ಮತ್ತು 2) ಹಾವೇರಿ ಜಿಲ್ಲೆ ಹಿರೇಕೆರೂರ ತಾಲ್ಲೂಕ್ ಕಚವಿ ಗ್ರಾಮ ಪಂಚಾಯತ್‌ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಎಫ್.ಎಂ.ಮಾಳಗಿಮನಿ (ಇನ್ನು ಮುಂದೆ ಕ್ರಮವಾಗಿ, '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಹಾವೇರಿ ಜಿಲ್ಲೆ ಹಿರೇಕೆರೂರ ತಾಲ್ಲೂಕ್ ಕಚವಿ ಗ್ರಾಮ ಪಂಚಾಯತ್‌ನ 2014-15 ಮತ್ತು 2015-16ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ವಯ ₹22,09,943/- ಹಣ ದುರುಪಯೋಗವಾಗಿದ್ದು, ಸದರಿ ದುರುಪಯೋಗದ ಮೊತ್ತವನ್ನು ಶೇ.15ರ ಬಡ್ಡಿಯೊಂದಿಗೆ ಪಾವತಿಸಲು 2ನೇ ಎದುರುದಾರರಿಗೆ ನಿರ್ದೇಶನ ನೀಡಲು, 1ನೇ ಎದುರುದಾರರು ಈವರೆಗೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ, ದುರುಪಯೋಗದ ಮೊತ್ತವನ್ನು ಬಡ್ಡಿ ಸಮೇತ ವಸೂಲಿ ಮಾಡಲು ಕೋರಿದ್ದಾರೆ.

467



3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಸದರಿ ದೂರಿನ ಲೆಕ್ಕ ಪರಿಶೋಧನಾ ವರದಿ 2006–07 ರಿಂದ 2014–15ನೇ ಸಾಲಿಗೆ ಸಂಬಂಧಿಸಿದ್ದು, ಸದರಿ ಅವಧಿಯಲ್ಲಿ 5 ಜನ ಗ್ರಾಮ ಪಂಚಾಯತ್ ಅಧ್ಯಕ್ಷರು, 5 ಉಪಾಧ್ಯಕ್ಷರು ಹಾಗೂ 7 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸಿದ್ದಾರೆ. ದೂರಿನ 2ನೇ ಎದುರುದಾರರು ದಿನಾಂಕ:07/03/09 ರಿಂದ 14/05/10 ಹಾಗೂ ದಿನಾಂಕ:13/11/11 ರಿಂದ 31/03/16 ರವರೆಗೆ ಕರ್ತವ್ಯ ನಿರ್ವಹಿಸಿದ್ದಾರೆ. ಕರ್ನಾಟಕ ಪಂಚಾಯತ್ ರಾಜ್ ಕಾಯಿದೆಯ ಕಲಂ 246(7)ರನ್ವಯ ಕ್ರಮ ಕೈಗೊಳ್ಳಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್ ರವರಿಗೆ ಜಿಲ್ಲಾ ಪಂಚಾಯತ್ ರವರಿಂದ ಪತ್ರ ಬರೆದು ಕ್ರಮ ವಹಿಸಲು ಸೂಚಿಸಿದೆ. 2ನೇ ಎದುರುದಾರರಿಗೆ ದಿನಾಂಕ:27/11/14, 10/12/14 ಮತ್ತು 21/07/15 ರಂದು ಕಾರಣ ಕೇಳುವ ನೋಟೀಸ್‌ಗಳನ್ನು ನೀಡಿದ್ದು, ಅವರು ಕಚವಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಲೆಕ್ಕ ಪರಿಶೋಧನೆಗೆ ಹಾಜರಾಗದೇ ಅಸಹಕಾರ ತೋರಿದ್ದರಿಂದ, ಸರ್ಕಾರದ ಆದೇಶ ದಿನಾಂಕ:18/04/17ರನ್ವಯ ಶಿಸ್ತು ಕ್ರಮ ಜರುಗಿಸಲು ಸೂಚಿಸಿದೆ ಹಾಗೂ 2ನೇ ಎದುರುದಾರರಿಂದ ₹17,324/–ಗಳನ್ನು (16 ಮಾನವ ದಿನಗಳ ನಷ್ಟ) ವಸೂಲಿ ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾವೇರಿ ರವರು ಸೂಚಿಸಿದನ್ವಯ 2ನೇ ಎದುರುದಾರರು ದಿ:12/06/16ರಂದು ಸದರಿ ಮೊತ್ತವನ್ನು ಸರ್ಕಾರದ ಲೆಕ್ಕ ಪರಿಶೋಧನಾ ಶುಲ್ಕ ಶೀರ್ಷಿಕೆಗೆ ತುಂಬಿದ್ದಾರೆ. ಲೆಕ್ಕ ಪರಿಶೋಧನೆಗೆ ಹಾಜರಾದ ಸಿಬ್ಬಂದಿಯವರಿಗೆ ಗ್ರಾಮ ಪಂಚಾಯತ್‌ನ ದಾಖಲೆಗಳನ್ನು 2ನೇ ಎದುರುದಾರರು ಹಾಜರುಪಡಿಸದೇ ಅಸಹಕಾರ ತೋರಿದ ಬಗ್ಗೆ ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಿದ್ದು, ಸದರಿಯವರು ವಿಚಾರಣೆಗೆ ಹಾಜರಾಗದೇ ಇರುವುದರಿಂದ, ಸದರಿಯವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ಇಲಾಖಾ ವಿಚಾರಣೆಯ ಅಂತಿಮ ಆದೇಶವನ್ನು ಹೊರಡಿಸಿ, ಅವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಸಹಿತವಾಗಿ ತಡೆಯುವ ದಂಡನೆಯನ್ನು ವಿಧಿಸಿದೆ. ಗ್ರಾಮ ಪಂಚಾಯತ್‌ಗಳ ಹಣ ದುರುಪಯೋಗ ಪ್ರಕರಣಗಳ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಲು ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರವಿದೆ. ಕಾರಣ, ದೂರುದಾರರು ನೀಡಿರುವ ದೂರಿನಲ್ಲಿ ಸತ್ಯಾಂಶ ಇಲ್ಲವೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

5. ಒಂದನೇ ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

1ನೇ ಎದುರುದಾರರು 58 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸೇರಿ ₹32,90,636/–ಗಳ ಹಣ ದುರುಪಯೋಗಪಡಿಸಿದ್ದು ಖಚಿತವಾಗಿದ್ದರಿಂದ, ಸದರಿಯವರುಗಳಿಂದ ದುರುಪಯೋಗದ ಮೊತ್ತವನ್ನು ಬಡ್ಡಿ ಸಮೇತ ವಸೂಲಿ ಮಾಡಬೇಕೆಂದು ಕೋರಿದ್ದಾರೆ.

BGM/9627/18
468



6. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ.ಮಲ್ಲಿಕಾರ್ಜುನ ಹಾಲಕೇರಿ, ಶ್ರೀ.ಎಸ್.ಬಿ.ಕುಂಟನಹೊಸಳ್ಳಿ [ಹಾಲೀ ಮೃತ], ಶ್ರೀ.ಎಂ.ಎಂ.ಸವಣೂರು ಮತ್ತು ಶ್ರೀ.ಸಿ.ಆರ್.ಪೂಜಾರ್ ಹಾಗೂ ಅಧ್ಯಕ್ಷರಾದ ಶ್ರೀಮತಿ.ನಾಗವೇಣಿ.ಡಿ ಮಡಿವಾಳರ, ಶ್ರೀ.ಶಂಭುಲಿಂಗಪ್ಪ ಎಂ ಬ್ಯಾಗವಾದಿ, ಶ್ರೀ.ಹೊಳಬಸವಪ್ಪ ಮಳವಳ್ಳಿ ಮತ್ತು ಶ್ರೀ.ಚಂದ್ರೇಗೌಡ ಸಿ ಹಳ್ಳೂರು ರವರುಗಳನ್ನು 3 ರಿಂದ 10ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಲಾಯಿತು.

7. ಮೂರನೇ (3ನೇ) ಎದುರುದಾರರು ತಾವು 2006 ರಿಂದ 2007ನೇ ಸಾಲಿನಲ್ಲಿ ಕಚವಿ ಗ್ರಾಮ ಪಂಚಾಯತ್‌ನಲ್ಲಿ ಸೇವೆ ಸಲ್ಲಿಸಿ, 2011ನೇ ಸಾಲಿನಲ್ಲಿ ನಿವೃತ್ತಿ ಆಗಿರುವುದಾಗಿ ಹೇಳಿದ್ದಾರೆ.

8. ನಾಲ್ಕನೇ (4ನೇ) ಎದುರುದಾರರು ದಿ:06/12/15ರಂದು ಮರಣ ಹೊಂದಿದ್ದಾರೆಂದು ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಹಾವೇರಿ ರವರ ವರದಿಯಲ್ಲಿ ಕಂಡು ಬಂದಿದೆ.

9. ಐದನೇ (5ನೇ) ಎದುರುದಾರರು ತಾವು ದಿ:07/08/2006 ರಿಂದ 20/11/2006 ಮತ್ತು 14/05/10 ರಿಂದ 13/10/10ರವರೆಗೆ ಕಚವಿ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಿದ ಅವಧಿಯ ದಾಖಲೆಗಳನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

10. ಆರನೇ (6ನೇ) ಎದುರುದಾರರು ತಾವು ದಿ:21/11/2006 ರಿಂದ 06/03/2009 ರವರೆಗೆ ಕಚವಿ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದು, ತಮ್ಮ ಅವಧಿಯಲ್ಲಿ ಮಾಡಿದ ಖರ್ಚಿನ ವಿವರಗಳನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

11. ಏಳನೇ (7ನೇ) ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿಲ್ಲ.

12. ಎಂಟನೇ (8ನೇ) ಎದುರುದಾರರು ತಾವು ದಿ:25/09/07 ರಿಂದ 10/02/09 ರವರೆಗೆ ಕಚವಿ ಗ್ರಾಮ ಪಂಚಾಯತ್‌ನಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು, ತಮ್ಮ ಅವಧಿಯಲ್ಲಿ ಮಾಡಿದ ಖರ್ಚಿನ ವಿವರಗಳನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

13. ಒಂಬತ್ತನೇ (9ನೇ) ಎದುರುದಾರರು ತಾವು ದಿ:11/02/09 ರಿಂದ 23/06/10 ರವರೆಗೆ ಕಚವಿ ಗ್ರಾಮ ಪಂಚಾಯತ್‌ನಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು, ತಮ್ಮ ಅವಧಿಯಲ್ಲಿ ಮಾಡಿದ ಖರ್ಚಿನ ವಿವರಗಳನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

14. ಹತ್ತನೇ (10ನೇ) ಎದುರುದಾರರು ತಾವು ದಿ:23/12/12 ರಿಂದ 31/03/15 ರವರೆಗೆ ಕಚವಿ ಗ್ರಾಮ ಪಂಚಾಯತ್‌ನಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದು, ತಮ್ಮ ಅವಧಿಯಲ್ಲಿ ಮಾಡಿದ ಖರ್ಚಿನ ವಿವರಗಳನ್ನು ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸಲ್ಲಿಸಿರುವುದಾಗಿ ಹೇಳಿದ್ದಾರೆ.

15. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಹಾವೇರಿ ಜಿಲ್ಲೆ ಹಿರೇಕೆರೂರ ತಾಲ್ಲೂಕ್ ಕಚವಿ ಗ್ರಾಮ ಪಂಚಾಯತ್‌ನ 2006–07 ರಿಂದ 2014–15ನೇ ಸಾಲಿನ ಲೆಕ್ಕಪತ್ರ ತಪಾಸಣೆಯನ್ನು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಹಾವೇರಿ ರವರು ದಿ:01/03/16 ರಿಂದ 08/03/16ರವರೆಗೆ ನಡೆಸಿದ್ದಾರೆ. ಸದರಿ **ಲೆಕ್ಕ ಪರಿಶೋಧನಾ ವರದಿಯಲ್ಲಿ** ವಸೂಲಾತಿಗೆ ಸೂಚಿಸಿದ ಮೊತ್ತದ ವಿವರಗಳು ಈ ಕೆಳಗಿನಂತಿದೆ –

**ಖಂಡಿಕೆ–14(ಅ):–**

**I) 2006–07 ರಿಂದ 2014–15ನೇ ಸಾಲಿನವರೆಗೆ ತೆರಿಗೆ ವಸೂಲಿ ಮೊತ್ತ ಹಾಗೂ ಬ್ಯಾಂಕ್‌ಗೆ ಜಮಾ ಮಾಡಿದ ಮೊತ್ತ ಮತ್ತು ಆಯಾಯ ಸಾಲಿನ ವ್ಯತ್ಯಾಸದ ವಿವರಗಳು ಈ ಕೆಳಗಿನಂತಿದೆ–**

₹ ಗಳಲ್ಲಿ

| ಕ್ರ. ಸಂ. | ಅವಧಿ | ವಸೂಲಾದ ತೆರಿಗೆ ಮೊತ್ತ | ಬ್ಯಾಂಕ್‌ಗೆ ಜಮೆ ಮಾಡಿದ ಮೊತ್ತ | ವ್ಯತ್ಯಾಸ |
|---|---|---|---|---|
| 1 | 2006–07 | 121958.00 | 118595.00 | 3363.00 |
| 2 | 2007–08 | 130228.00 | 135253.00 | –5025.00 |

BSm/3627/18

470



| | | | | |
|---|---|---|---|---|
| 3 | 2008–09 | 114284.00 | 103564.00 | 10720.00 |
| 4 | 2009–10 | 198164.00 | 188573.00 | 9591.00 |
| 5 | 2010–11 | 145602.00 | 165203.00 | –19601.00 |
| 6 | 2011–12 | 543711.00 | 450035.00 | 93676.00 |
| 7 | 2012–13 | 111753.00 | 145058.00 | –33305.00 |
| 8 | 2013–14 | 225285.00 | 278466.00 | –53181.00 |
| 9 | 2014–15 | 156219.00 | 123324.00 | 32895.00 |
| | **ಒಟ್ಟು ಮೊತ್ತ** | 1747204.00 | 1708071.00 | 39133.00 |

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006ರ ನಿಯಮ 19ರನ್ವಯ ಪಂಚಾಯತ್‌ನಲ್ಲಿ ವಸೂಲಾದ ತೆರಿಗೆ ಹಣವನ್ನು ಮರು ದಿನದೊಳಗೆ ಬ್ಯಾಂಕ್‌ಗೆ ಜಮಾ ಮಾಡಬೇಕು. ಆದರೆ, ಲೆಕ್ಕಪತ್ರ ತಪಾಸಣಾ ವರದಿಯನ್ವಯ 2007–08, 2010–11, 2012–13 ಮತ್ತು 2013–14ನೇ ಸಾಲುಗಳಲ್ಲಿ ವಸೂಲಾದ ತೆರಿಗೆ ಮೊತ್ತದಲ್ಲಿನ ವ್ಯತ್ಯಾಸದ ಒಟ್ಟು ಮೊತ್ತ ₹39,133/–ಗಳನ್ನು ಬ್ಯಾಂಕಿಗೆ ಜಮಾ ಮಾಡದೇ ಇರುವುದು ಕಂಡು ಬಂದಿದ್ದು, ಸದರಿ ಮೊತ್ತ ದುರುಪಯೋಗವಾಗಿದೆಯೆಂದು ಹೇಳಬಹುದು. ದಿ:31/03/2015ರ ಅಂತ್ಯಕ್ಕೆ ಒಟ್ಟು ಮೊತ್ತ ₹39,133/–ಗಳನ್ನು ಬ್ಯಾಂಕಿಗೆ ಜಮಾ ಮಾಡದೇ ಇರುವುದರಿಂದ, ಸದರಿ ಮೊತ್ತಕ್ಕೆ ಆಗಿನ ಪಂಚಾಯತ್ ಸಿಬ್ಬಂದಿಯಾದ 2ನೇ ಎದುರುದಾರರು ಜವಾಬ್ದಾರರಾಗಿದ್ದಾರೆ;

ಖಂಡಿಕೆ–45:–

II) **13ನೇ ಹಣಕಾಸು ಯೋಜನೆಯ ಖಾತೆ ಸಂಖ್ಯೆ:2018647 (ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಹಂಸಬಾವಿ) ಯಿಂದ ಸಿಬ್ಬಂದಿ \ ಅಧಿಕಾರಿಗಳ ಹೆಸರಿನಲ್ಲಿ ಹಾಗೂ ಸ್ವಂತ ಹೆಸರಿನಲ್ಲಿ ಹಣವನ್ನು ಡ್ರಾ ಮಾಡಿದ ವಿವರ –**

| ಕ್ರ. ಸಂ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ | ಪಾಸ್‌ಪುಸ್ತಕದ ಪ್ರಕಾರ ವಿವರಣೆ |
|---|---|---|---|---|
| 2012–13 | | | | |
| 1 | 2121 | 02/05/2012 | 29800.00 | ಸೆಲ್ಫ್ |
| 2 | 21216 | 26/05/2012 | 19650.00 | ಸೆಲ್ಫ್ |
| 3 | 008101 | 11/08/2012 | 36500.00 | ಸೆಲ್ಫ್ |
| 4 | 008102 | 27/08/2012 | 18600.00 | ಎಫ್.ಎಂ.ಮಾಳಗಿಮನಿ |
| 5 | 008103 | 05/09/2012 | 35000.00 | ಎಫ್.ಎಂ.ಮಾಳಗಿಮನಿ |
| 6 | 008104 | 05/09/2012 | 40000.00 | ಎಫ್.ಎಂ.ಮಾಳಗಿಮನಿ |
| 7 | 008106 | 12/09/2012 | 19000.00 | ಸೆಲ್ಫ್ |
| 8 | 008107 | 21/09/2012 | 19000.00 | ಎಫ್.ಎಂ.ಮಾಳಗಿಮನಿ |
| 9 | 008109 | 26/09/2012 | 28929.00 | ಎಫ್.ಎಂ.ಮಾಳಗಿಮನಿ |

471



| | | | | |
|---|---|---|---|---|
| 10 | 008110 | 26/09/2012 | 28000.00 | ಎಫ್.ಎಂ.ಮಾಳಗಿಮನಿ |
| 11 | 008112 | 01/10/2012 | 19200.00 | ಎಫ್.ಎಂ.ಮಾಳಗಿಮನಿ |
| 12 | 008117 | 10/10/2012 | 6000.00 | ಪ್ರಕಾಶ.ಎಂ.ಬಾರ್ಕಿ |
| 13 | 008119 | 11/10/2012 | 19200.00 | ಎಫ್.ಎಂ.ಮಾಳಗಿಮನಿ |
| 14 | 008123 | 05/12/2012 | 5000.00 | ಎಫ್.ಎಂ.ಮಾಳಗಿಮನಿ |
| 2013–14 | | | | |
| 15 | 008925 | 09/04/2013 | 25400.00 | ಎಫ್.ಎಂ.ಮಾಳಗಿಮನಿ |
| 16 | 008927 | 02/04/2013 | 24300.00 | ಎಫ್.ಎಂ.ಮಾಳಗಿಮನಿ |
| 17 | 008928 | 15/04/2013 | 18500.00 | ಎಫ್.ಎಂ.ಮಾಳಗಿಮನಿ |
| 18 | 008931 | 27/04/2013 | 18300.00 | ಎಫ್.ಎಂ.ಮಾಳಗಿಮನಿ |
| 19 | 008942 | 08/07/2013 | 22600.00 | ಎಫ್.ಎಂ.ಮಾಳಗಿಮನಿ |
| 20 | 008943 | 15/07/2013 | 23500.00 | ಎಫ್.ಎಂ.ಮಾಳಗಿಮನಿ |
| 21 | 008944 | 30/07/2013 | 24500.00 | ಎಫ್.ಎಂ.ಮಾಳಗಿಮನಿ |
| 22 | 008945 | 03/08/2013 | 26500.00 | ಎಫ್.ಎಂ.ಮಾಳಗಿಮನಿ |
| 23 | 008946 | 05/08/2013 | 30200.00 | ಎಫ್.ಎಂ.ಮಾಳಗಿಮನಿ |
| 24 | 008947 | 07/08/2013 | 38700.00 | ಎಫ್.ಎಂ.ಮಾಳಗಿಮನಿ |
| 25 | 008950 | 17/08/2013 | 24500.00 | ಎಫ್.ಎಂ.ಮಾಳಗಿಮನಿ |
| 26 | 009451 | 27/08/2013 | 25600.00 | ಎಫ್.ಎಂ.ಮಾಳಗಿಮನಿ |
| 27 | 008949 | 29/08/2013 | 28756.00 | ಪಿ.ಎಂ.ಬಾರ್ಕಿ |
| 28 | 009452 | 24/09/2013 | 31000.00 | ಎಫ್.ಎಂ.ಮಾಳಗಿಮನಿ |
| 29 | 009458 | 21/10/2013 | 8200.00 | ಎಫ್.ಎಂ.ಮಾಳಗಿಮನಿ |
| 30 | 009464 | 06/11/2013 | 15000.00 | ಎಫ್.ಎಂ.ಮಾಳಗಿಮನಿ |
| 31 | 009462 | 30/10/2013 | 57422.00 | ಪಿ.ಎಂ.ಬಾರ್ಕಿ |
| 32 | 009466 | 08/01/2014 | 25200.00 | ಎಫ್.ಎಂ.ಮಾಳಗಿಮನಿ |
| 33 | 009467 | 19/01/2014 | 25000.00 | ಎಫ್.ಎಂ.ಮಾಳಗಿಮನಿ |
| 34 | 009468 | 16/01/2014 | 20000.00 | ಪಿ.ಎಂ.ಬಾರ್ಕಿ |
| 35 | 009473 | 01/02/2014 | 40000.00 | ಪಿ.ಎಂ.ಬಾರ್ಕಿ |
| 36 | 009475 | 03/03/2014 | 35000.00 | ಎಫ್.ಎಂ.ಮಾಳಗಿಮನಿ |
| 2014–15 | | | | |
| 37 | 010627 | 28/04/2014 | 25500.00 | ಎಫ್.ಎಂ.ಮಾಳಗಿಮನಿ |
| 38 | 010628 | 28/04/2014 | 28000.00 | ಎಫ್.ಎಂ.ಮಾಳಗಿಮನಿ |
| 39 | 010629 | 29/04/2014 | 24500.00 | ಎಫ್.ಎಂ.ಮಾಳಗಿಮನಿ |
| 40 | 010630 | 30/04/2014 | 21500.00 | ಎಫ್.ಎಂ.ಮಾಳಗಿಮನಿ |
| 41 | 010631 | 08/05/2014 | 10000.00 | ಎಫ್.ಎಂ.ಮಾಳಗಿಮನಿ |

BGM/ 962/18

422



| | | | | |
|---|---|---|---|---|
| 42 | 010636 | 22/05/2014 | 21500.00 | ಎಫ್.ಎಂ.ಮಾಳಗಿಮನಿ |
| 43 | 010637 | 24/05/2014 | 28000.00 | ಎಫ್.ಎಂ.ಮಾಳಗಿಮನಿ |
| 44 | 010642 | 05/06/2014 | 21000.00 | ಎಫ್.ಎಂ.ಮಾಳಗಿಮನಿ |
| 45 | 010644 | 06/06/2014 | 23500.00 | ಎಫ್.ಎಂ.ಮಾಳಗಿಮನಿ |
| 46 | 010645 | 10/06/2014 | 18500.00 | ಎಫ್.ಎಂ.ಮಾಳಗಿಮನಿ |
| 47 | 010643 | 12/06/2014 | 7000.00 | ಎಫ್.ಎಂ.ಮಾಳಗಿಮನಿ |
| 48 | 010647 | 19/06/2014 | 12500.00 | ಎಫ್.ಎಂ.ಮಾಳಗಿಮನಿ |
| 49 | 010649 | 02/07/2014 | 12000.00 | ಎಫ್.ಎಂ.ಮಾಳಗಿಮನಿ |
| 50 | 010650 | 25/07/2014 | 21600.00 | ಎಫ್.ಎಂ.ಮಾಳಗಿಮನಿ |
| 51 | 011456 | 28/07/2014 | 18600.00 | ಎಫ್.ಎಂ.ಮಾಳಗಿಮನಿ |
| 52 | 011459 | 13/08/2014 | 17500.00 | ಎಫ್.ಎಂ.ಮಾಳಗಿಮನಿ |
| 53 | 011464 | 19/08/2014 | 57422.00 | ಪ್ರಕಾಶ್.ಎಂ.ಬಾರ್ಕಿ |
| 54 | 011462 | 19/08/2014 | 13550.00 | ಪ್ರಕಾಶ್.ಎಂ.ಬಾರ್ಕಿ |
| 55 | 011465 | 21/08/2014 | 22000.00 | ಎಫ್.ಎಂ.ಮಾಳಗಿಮನಿ |
| 56 | 011467 | 03/09/2014 | 10000.00 | ಎಫ್.ಎಂ.ಮಾಳಗಿಮನಿ |
| 57 | 011469 | 03/09/2014 | 28500.00 | ಎಫ್.ಎಂ.ಮಾಳಗಿಮನಿ |
| 58 | 011470 | 01/10/2014 | 19200.00 | ಎಫ್.ಎಂ.ಮಾಳಗಿಮನಿ |
| 59 | 011472 | 15/10/2014 | 29000.00 | ಎಫ್.ಎಂ.ಮಾಳಗಿಮನಿ |
| 60 | 011473 | 16/10/2014 | 8262.00 | ಎಫ್.ಎಂ.ಮಾಳಗಿಮನಿ |
| 61 | 011474 | 16/10/2014 | 25000.00 | ಎಫ್.ಎಂ.ಮಾಳಗಿಮನಿ |
| 62 | 011475 | 03/11/2014 | 11500.00 | ಎಫ್.ಎಂ.ಮಾಳಗಿಮನಿ |
| 63 | 012602 | 02/12/2014 | 10500.00 | ಎಫ್.ಎಂ.ಮಾಳಗಿಮನಿ |
| 64 | 012605 | 12/12/2014 | 10000.00 | ಎಫ್.ಎಂ.ಮಾಳಗಿಮನಿ |
| 65 | 012607 | 30/12/2014 | 5000.00 | ಎಫ್.ಎಂ.ಮಾಳಗಿಮನಿ |
| 66 | 012608 | 05/02/2014 | 10000.00 | ಎಫ್.ಎಂ.ಮಾಳಗಿಮನಿ |
| 67 | 012610 | 19/02/2014 | 5000.00 | ಪ್ರಕಾಶ್.ಎಂ.ಬಾರ್ಕಿ |
| | **ಒಟ್ಟು ಮೊತ್ತ** | | 1488191.00 | |

ಸದರಿ ಖರ್ಚುಗಳಿಗೆ ಸಂಬಂಧಪಟ್ಟಂತೆ ವೋಚರ್ ಹಾಗೂ ಯಾವುದೇ ಪೂರಕ ದಾಖಲೆಗಳಿಲ್ಲ ಮತ್ತು ವಿವರಣೆಯನ್ನು ನೀಡಿಲ್ಲ. ಸದರಿ ಖರ್ಚುಗಳ ಅವಧಿಯಲ್ಲಿ 2ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ;

ಖಂಡಿಕೆ–46:–

III) **12ನೇ ಹಣಕಾಸು ಯೋಜನೆಯ ಖಾತೆ ಸಂಖ್ಯೆ:2014677 (ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ಹಂಸಬಾವಿ) ಯಿಂದ ಸಿಬ್ಬಂದಿ \ ಅಧಿಕಾರಿಗಳ ಹೆಸರಿನಲ್ಲಿ ಹಾಗೂ ಸ್ವಂತ ಹೆಸರಿನಲ್ಲಿ ಹಣವನ್ನು ಡ್ರಾ ಮಾಡಿದ ವಿವರ –**

| ಕ್ರ. ಸಂ. | ಚೆಕ್ ಸಂಖ್ಯೆ | ದಿನಾಂಕ | ಮೊತ್ತ ₹ಗಳಲ್ಲಿ | ಪಾಸ್‌ಪುಸ್ತಕದ ಪ್ರಕಾರ ವಿವರಣೆ |
|---|---|---|---|---|
| 2007–08 | | | | |
| 1 | 283253 | 07/11/2007 | 9087.00 | ಪ್ರಕಾಶ್.ಎಂ.ಬಾರ್ಕಿ |
| 2009–10 | | | | |
| 2 | 283269 | 01/08/2009 | 8300.00 | ಪ್ರಕಾಶ್.ಎಂ.ಬಾರ್ಕಿ |
| 3 | 283270 | 01/08/2009 | 28000.00 | ಪ್ರಕಾಶ್.ಎಂ.ಬಾರ್ಕಿ |
| 4 | 283271 | 28/08/2009 | 20000.00 | ಪ್ರಕಾಶ್.ಎಂ.ಬಾರ್ಕಿ |
| 2010–11 | | | | |
| 5 | 283276 | 30/10/2011 | 14950.00 | ಪ್ರಕಾಶ್.ಎಂ.ಬಾರ್ಕಿ |
| **ಒಟ್ಟು ಮೊತ್ತ** | | | 80337.00 | |

ಸದರಿ ಖರ್ಚುಗಳಿಗೆ ಸಂಬಂಧಪಟ್ಟಂತೆ ವೋಚರ್ ಹಾಗೂ ಯಾವುದೇ ಪೂರಕ ದಾಖಲೆಗಳಿಲ್ಲ ಮತ್ತು ವಿವರಣೆಯನ್ನು ನೀಡಿಲ್ಲ. ಸದರಿ ಖರ್ಚುಗಳ ಅವಧಿಯಲ್ಲಿ 2ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ;

ಖಂಡಿಕೆ–48:–

IV) **ಸಂಪೂರ್ಣ ಸ್ವಚ್ಛತಾ ಆಂದೋಲನ ಯೋಜನೆಯ ಫಲಾನುಭವಿಗಳಿಗೆ ಹಣ ನೀಡಿದ ಬಗ್ಗೆ–**

ದಿನಾಂಕ:06/06/08ರಂದು ಚೆಕ್ ಸಂಖ್ಯೆ:225323 ಯಿಂದ 225325 ವರೆಗಿನ ಚೆಕ್‌ಗಳಲ್ಲಿ ತಲಾ ₹1,200/–ರಂತೆ ಹಣವನ್ನು ಫಲಾನುಭವಿಗಳಿಗೆ ನೀಡಿದೆಯೆಂದು ನಗದು ಪಾಸ್ ಪುಸ್ತಕ ಮತ್ತು ವೋಚರ್‌ಗಳಲ್ಲಿ ದಾಖಲಾಗಿದ್ದು, ಪಾಸ್ ಪುಸ್ತಕದ ಪ್ರಕಾರ ಫಲಾನುಭವಿಗಳಿಗೆ ತಲಾ ₹11,200/–ಗಳನ್ನು ನೀಡಿದೆ. ಹಾಗಾಗಿ, ಒಟ್ಟು ₹30,000/–(33600–3600)ಗಳ ವ್ಯತ್ಯಾಸದ ಬಗ್ಗೆ ವಿವರಣೆಯನ್ನು ನೀಡಿಲ್ಲ. ಸದರಿ ಅವಧಿಯಲ್ಲಿ 6ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ;

ಖಂಡಿಕೆ–51(2):–

V) **2007–08 ಮತ್ತು 2008–09ರ ಅವಧಿಗಳಲ್ಲಿ ಆಹಾರ ಧಾನ್ಯ ಸ್ವೀಕಾರ \ ವಿನಿಯೋಗದ ವ್ಯತ್ಯಾಸದ ಬಗ್ಗೆ–**

ದಿನಾಂಕ:23/10/07ರಂದು 17.40 ಕ್ವಿಂಟಾಲ್ ಅಕ್ಕಿ ಮತ್ತು 4.40 ಕ್ವಿಂಟಾಲ್ ಗೋಧಿ ಹಾಗೂ 07/01/09ರಂದು 10.10 ಕ್ವಿಂಟಾಲ್ ಅಕ್ಕಿ ಸ್ವೀಕರಿಸಿದ ಬಗ್ಗೆ ಸ್ವೀಕೃತಿಗಳಲ್ಲಿ ದಾಖಲಾಗಿದ್ದು, ಒಟ್ಟು 26.70 ಕ್ವಿಂಟಾಲ್ ಅಕ್ಕಿ ಮತ್ತು 3.70 ಕ್ವಿಂಟಾಲ್ ಗೋಧಿ ವಿನಿಯೋಗಿಸಿದೆ. 80 ಕೆಜಿ

BSM/1862/18
474



ಅಕ್ಕಿ ಶಿಲ್ಕು ಉಳಿದಿದ್ದು, ಗೋಧಿಯು 1.13 ಕೆಜಿ ಉಳಿದಿದ್ದು ಕಂಡು ಬಂದಿದೆ. ಸದರಿ ಉಳಿಕೆ ಶಿಲ್ಕನ್ನು ಮುಂದುವರೆಸಿಕೊಂಡು ವಿನಿಯೋಗಿಸಿದ ಬಗ್ಗೆ ದಾಖಲೆ ಇಲ್ಲ ಮತ್ತು ಆ ಬಗ್ಗೆ ವಿವರಣೆಯನ್ನು ನೀಡಿಲ್ಲ. ಸದರಿ, ಆಹಾರ ಧಾನ್ಯದ ಒಟ್ಟು ಮೊತ್ತ ₹1,206/- ಆಗಿದೆ. ಸದರಿ ಅವಧಿಯಲ್ಲಿ 6ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

2) 9ನೇ ಎದುರುದಾರರು ತಮ್ಮ ಆಕ್ಷೇಪಣೆಯೊಂದಿಗೆ ಈ ಕೆಳಗಿನ ದಾಖಲೆಗಳನ್ನು ಸಲ್ಲಿಸಿದೆ –

1. 2009–10ನೇ ಸಾಲಿನ ವರ್ಗ–1ರ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹18,000/-) ವಿವರಗಳೊಂದಿಗೆ ವೋಚರ್ ಮತ್ತು ಟ್ಯಾಕ್ಸ್ ಇನ್‌ವಾಯ್ಸ್, ಅಂದಾಜು ಪಟ್ಟಿ, ನಗದು ವಹಿ ಮುಂತಾದ ದಾಖಲೆಗಳ ಪ್ರತಿಗಳು;
2. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹3,600/-) ವೋಚರ್ ಮತ್ತು ನಗದು ಬಿಲ್;
3. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹25,000/-) ದಿನಗೂಲಿ ಹಾಜರಾತಿ, ಹಣ ಪಾವತಿ ರಸೀದಿ, ದಿನಾಂಕ ಮತ್ತು ವಿವರಗಳು ನಮೂದಾಗಿರದ ಹಿಂದೂಸ್ತಾನ್ ಹಾರ್ಡ್‌ವೇರ್ ಮತ್ತು ವಾಟರ್ ಸಪ್ಲೈ, ಹಿರೇಕೆರೂರು ರವರ ₹2,105/-ರ ದರಪಟ್ಟಿ;
4. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹23,000/-) ದರಪಟ್ಟಿ;
5. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹10,000/-) ದರಪಟ್ಟಿ;
6. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹15,000/-) ರಸೀದಿ, ಹಣ ಪಾವತಿ ರಸೀದಿಗಳು, ವಿದ್ಯುತ್ ಬಿಲ್ ಪಾವತಿ ರಸೀದಿ, ದಿನಗೂಲಿ ಹಾಜರಾತಿ, ಮುಂತಾದ ದಾಖಲೆಗಳ ಪ್ರತಿಗಳು;
7. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹14,500/-) ದರಪಟ್ಟಿ;
8. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹13,000/-) ಹಣ ಪಾವತಿ ರಸೀದಿಗಳು ಪ್ರತಿಗಳು;
9. 2009–10ನೇ ಸಾಲಿನ ಗ್ರಾಮ ನಿಧಿ–2 ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹26,000/-) ಅಂದಾಜು ಪಟ್ಟಿ, ಹಣ ಪಾವತಿ ರಸೀದಿ, ಟ್ಯಾಕ್ಸ್ ಇನ್‌ವಾಯ್ಸ್, ನಗದು ಬಿಲ್, ದಿನಗೂಲಿ ಹಾಜರಾತಿ, ದರಪಟ್ಟಿ;
10. ಚೆಕ್ ಸಂಖ್ಯೆ:283336 ಮೊತ್ತ ₹20,000/- [ಲೆಕ್ಕ ಪರಿಶೋಧನಾ ವರದಿಯ ಖಂಡಿಕೆ–34ರ ಕ್ರಮ ಸಂಖ್ಯೆ–8ರ ಚೆಕ್] ಗೆ ಸಂಬಂಧಿಸಿದಂತೆ ಹಣ ಪಾವತಿ ರಸೀದಿ, ಹಾಜರಾತಿ ಪಟ್ಟಿ;
11. ಚೆಕ್ ಸಂಖ್ಯೆ:283148 ಮೊತ್ತ ₹15,000/- [ಲೆಕ್ಕ ಪರಿಶೋಧನಾ ವರದಿಯ ಖಂಡಿಕೆ–33ರ ಕ್ರಮ ಸಂಖ್ಯೆ–11ರ ಚೆಕ್] ಗೆ ಸಂಬಂಧಿಸಿದಂತೆ ವೋಚರ್, ಹಾಜರಾತಿ ಪಟ್ಟಿ;
12. 2009–10ನೇ ಸಾಲಿನ ನೀರು ನಿರ್ವಹಣೆಗೆ ಚೆಕ್ ಸಂಖ್ಯೆ:1141208 [ಲೆಕ್ಕ ಪರಿಶೋಧನಾ ವರದಿಯ ಖಂಡಿಕೆ–32ರ ಕ್ರಮ ಸಂಖ್ಯೆ–3ರ ಚೆಕ್] ಗೆ ಸಂಬಂಧಿಸಿದ ಅಂದಾಜು ಪಟ್ಟಿ, ಹಣ ಪಾವತಿ ರಸೀದಿ (ಒಟ್ಟು ಖರ್ಚು ₹10,000/-);

ಕ್ರಮ ಸಂಖ್ಯೆ–8ರ ಚೆಕ್] ಗೆ ಸಂಬಂಧಿಸಿದಂತೆ ಹಣ ಪಾವತಿ ರಸೀದಿ, ಹಾಜರಾತಿ ಪಟ್ಟಿ;

1475



13. 2009–10ನೇ ಸಾಲಿನ ನೀರು ನಿರ್ವಹಣೆಗೆ ಚೆಕ್ ಸಂಖ್ಯೆ:1141205 [ಲೆಕ್ಕ ಪರಿಶೋಧನಾ ವರದಿಯ ಖಂಡಿಕೆ–32ರ ಕ್ರಮ ಸಂಖ್ಯೆ–1ರ ಚೆಕ್] ಗೆ ಸಂಬಂಧಿಸಿದ ಅಂದಾಜು ಬಿಲ್, ಟ್ಯಾಕ್ಸ್ ಇನ್‌ವಾಯ್ಸ್, ಹಣ ಪಾವತಿ ರಸೀದಿ (ಒಟ್ಟು ಖರ್ಚು ₹14,510/–);
14. 2009–10ನೇ ಸಾಲಿನ ನೀರು ನಿರ್ವಹಣೆಗೆ ಚೆಕ್ ಸಂಖ್ಯೆ:1141206 [ಲೆಕ್ಕ ಪರಿಶೋಧನಾ ವರದಿಯ ಖಂಡಿಕೆ–32ರ ಕ್ರಮ ಸಂಖ್ಯೆ–2ರ ಚೆಕ್] ಗೆ ಸಂಬಂಧಿಸಿದ ನಗದು ಬಿಲ್, ದಿನಗೂಲಿ ಹಾಜರಾತಿ, ಅಂದಾಜು ಪಟ್ಟಿ (ಒಟ್ಟು ಖರ್ಚು ₹7,265/–);
15. ಹಿಂದೂಸ್ತಾನ್ ಹಾರ್ಡ್‌ವೇರ್ ಮತ್ತು ವಾಟರ್ ಸಪ್ಲೈ, ಹಿರೇಕೆರೂರು ರವರ ದಿನಾಂಕ ನಮೂದಿರದ ಮತ್ತು ಪಂಚಾಯತ್ ಹೆಸರಿಗೆ ನೀಡದ ಕ್ರಮ ಸಂಖ್ಯೆ–365ರ ಅಂದಾಜು ಪಟ್ಟಿ, ಖಾಲಿ ಅಂದಾಜು ಪಟ್ಟಿ, ದಿನಗೂಲಿ ಹಾಜರಾತಿ, ಹಣ ಸ್ವೀಕೃತ ರಸೀದಿ ಮೊತ್ತ ₹28,400/– ಇದೆ. ಅದರ ಬಾಬ್ತು ಖರ್ಚು ಮೊತ್ತ ₹30,000/– ಚೆಕ್ ಸಂಖ್ಯೆ:1141218 ದಿ:10/4/12 [ಲೆಕ್ಕ ಪರಿಶೋಧನಾ ವರದಿಯ ಖಂಡಿಕೆ–32ರ ಕ್ರಮ ಸಂಖ್ಯೆ–9];
16. 12ನೇ ಹಣಕಾಸು ಯೋಜನೆಗೆ ಸಂಬಂಧಿಸಿದ 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹20,000/–) ಹಣ ಪಾವತಿ ರಸೀದಿ, ದಿನಗೂಲಿ ಹಾಜರಾತಿ;
17. 12ನೇ ಹಣಕಾಸು ಯೋಜನೆಗೆ ಸಂಬಂಧಿಸಿದ [ಲೆಕ್ಕ ಪರಿಶೋಧನಾ ವರದಿಯ ಖಂಡಿಕೆ–46ರ ಕ್ರಮ ಸಂಖ್ಯೆ–1 ಮತ್ತು 5ರ ಚೆಕ್‌ಗಳು] ವಿಶ್ವಾಸ್ ಎಲೆಕ್ಟ್ರಿಕಲ್ಸ್, ಹಿರೇಕೆರೂರು ಟ್ಯಾಕ್ಸ್ ಇನ್‌ವಾಯ್ಸ್ ಮತ್ತು ಹಣ ಸ್ವೀಕೃತಿ ರಸೀದಿ (ಒಟ್ಟು ಖರ್ಚು ₹81,337/–);
18. 12ನೇ ಹಣಕಾಸು ಯೋಜನೆಗೆ ಸಂಬಂಧಿಸಿದ [ಲೆಕ್ಕ ಪರಿಶೋಧನಾ ವರದಿಯ ಖಂಡಿಕೆ–46ರ ಕ್ರಮ ಸಂಖ್ಯೆ–2ರ ಚೆಕ್] ಶ್ರೀ ಗಣೇಶ್ ಪ್ರಿಂಟರ್ಸ್, ಹಿರೇಕೆರೂರು ಟ್ಯಾಕ್ಸ್ ಇನ್‌ವಾಯ್ಸ್ ಮತ್ತು ಹಣ ಸ್ವೀಕೃತಿ ರಸೀದಿ (ಒಟ್ಟು ಖರ್ಚು ₹8,300/–);
19. 12ನೇ ಹಣಕಾಸು ಯೋಜನೆಗೆ ಸಂಬಂಧಿಸಿದ [ಲೆಕ್ಕ ಪರಿಶೋಧನಾ ವರದಿಯ ಖಂಡಿಕೆ–46ರ ಕ್ರಮ ಸಂಖ್ಯೆ–5ರ ಚೆಕ್] ರವಿರಾಜ ಲೇತ್ ಇಂಜಿನಿಯರಿಂಗ್ ವರ್ಕ್ಸ್, ಹಿರೇಕೆರೂರು ಮಸ್ಟರ್ ರೋಲ್ ಮತ್ತು ಹಣ ಸ್ವೀಕೃತಿ ರಸೀದಿ (ಒಟ್ಟು ಖರ್ಚು ₹28,000/–);
20. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹15,000/–) ದಿನಗೂಲಿ ಹಾಜರಾತಿ;
21. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹11,080/–) ಬಿಲ್;
22. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹50,000/–) ವಿಶ್ವಾಸ್ ಎಲೆಕ್ಟ್ರಿಕಲ್ಸ್, ಹಿರೇಕೆರೂರು ರವರ ಎರಡು ಟ್ಯಾಕ್ಸ್ ಇನ್‌ವಾಯ್ಸ್‌ಗಳು;
23. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹10,000/–) ಹಣ ಸ್ವೀಕೃತಿ ರಸೀದಿ;
24. ದಿನಾಂಕ:07/05/09, 07/04/09, 07/03/09 ಮತ್ತು 07/02/09ರ ದೂರವಾಣಿ ಬಿಲ್‌ಗಳು ಕ್ರಮವಾಗಿ, ಮೊತ್ತ ₹197/–, ₹132/–, ₹66/– ಮತ್ತು ₹32/–;
25. 2009–10ನೇ ಸಾಲಿನ ಸಾದಿಲ್ವಾರು ಖರ್ಚಿನ (ಒಟ್ಟು ಖರ್ಚು ₹37,919/–) ಶ್ರೀ ವೀರಭದ್ರೇಶ್ವರ ಹಾರ್ಡ್‌ವೇರ್ ಎಲೆಕ್ಟ್ರಿಕಲ್ಸ್ ರವರ ಅಂದಾಜು ಬಿಲ್, ಈಶ್ವರ ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ವರ್ಕ್ಸ್ ರವರ ಬಿಲ್, ಮೂಕೇಶ್ವರ ಎಲೆಕ್ಟ್ರಿಕಲ್ಸ್ ವರ್ಕ್ಸ್ ರವರ ಅಂದಾಜು ಬಿಲ್‌ಗಳು, ಶ್ರೀ ಗುರುರಾಜ ಎಲೆಕ್ಟ್ರಿಕಲ್ಸ್ ರವರ ಬಿಲ್, ಸರಸ್ವತಿ ಬುಕ್ ಸ್ಟಾಲ್, ಶ್ರೀ ವಿಘ್ನೇಶ್ವರ

Bym/9627/18

476



ಎಂಟರ್‌ಪ್ರೈಸಸ್, ಶ್ರೀ ಮಲ್ಲಿಕಾರ್ಜುನ ಸ್ಟೋರ್ಸ್, ಓಂ ಫ್ಯಾನ್ಸಿ ಸ್ಟೋರ್ಸ್ ರವರ ಬಿಲ್, ವೋಚರ್, ಮಸ್ಟರ್ ರೋಲ್.

3) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮ 43ರನ್ವಯ ಪ್ರತಿ ಖರ್ಚಿಗೆ ಸಂಬಂಧಿಸಿದಂತೆ ಬಿಲ್ ಅಥವಾ ವೋಚರ್‌ಗಳು ಇರಬೇಕೆನ್ನುವುದು ಕಡ್ಡಾಯವಾಗಿದೆ. ಆದರೆ, ಮೇಲಿನ ಉಪ ಖಂಡಿಕೆ–1 (II ಮತ್ತು III)ರ ಸದರಿ ಖರ್ಚುಗಳಿಗೆ ಸಂಬಂಧಿಸಿದ ವೋಚರ್‌ಗಳಿಲ್ಲ;

4) ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮ 49ರನ್ವಯ ಗುತ್ತಿಗೆದಾರರುಗಳಿಗೆ, ಸರಬರಾಜುದಾರರಿಗೆ ಮತ್ತು ಯಾವುದೇ ಪಕ್ಷಗಾರರಿಗೆ ಹಣ ಪಾವತಿಯನ್ನು ಅವರ ಹೆಸರಿನಲ್ಲಿಯೇ ಅಕೌಂಟ್ ಪೇಯಿ ಚೆಕ್ ಮೂಲಕ ಮಾಡಬೇಕೆನ್ನುವುದು ಕಡ್ಡಾಯವಾಗಿದೆ. ಆದರೆ, ಮೇಲಿನ ಉಪ ಖಂಡಿಕೆ–1 (II ಮತ್ತು III) ಮತ್ತು ಮೇಲಿನ ಉಪ ಖಂಡಿಕೆ–2 ರಲ್ಲಿ ಹೇಳಿದ ಹಣದ ಮೊತ್ತವನ್ನು ಅಕೌಂಟ್ ಪೇಯಿ ಚೆಕ್ ಮೂಲಕ ನೀಡದೇ ಸೆಲ್ಫ್ ಚೆಕ್ \ ಪಂಚಾಯತ್ ಸಿಬ್ಬಂದಿ ಮೂಲಕ ಹಣವನ್ನು ಬ್ಯಾಂಕ್‌ನಿಂದ ಪಡೆದಿದೆ;

5) ಕಾರಣ, ಮೇಲಿನ ಉಪ ಖಂಡಿಕೆ–1 (II ಮತ್ತು III)ರ ಖರ್ಚುಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್‌ನ ಲೆಕ್ಕಪತ್ರ ಮತ್ತು ಬಡ್ಜೆಟ್) ನಿಯಮಾವಳಿಗಳು, 2006ರ ನಿಯಮ 43 ಮತ್ತು 49ರ ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

6) ಮೇಲಿನ ಉಪ ಖಂಡಿಕೆ–60(I ರಿಂದ V)ರಲ್ಲಿ ಹೇಳಿದ ಮೊತ್ತಗಳಾದ ₹39,133/–, ₹14,88,191/–, ₹80,337/–, ₹30,000/– ಮತ್ತು ₹1,206/–, ಒಟ್ಟು ಮೊತ್ತ ₹16,38,867/–ಗಳನ್ನು ವಸೂಲಿ ಮಾಡತಕ್ಕ ಮೊತ್ತ ಎಂದು ಲೆಕ್ಕ ತನಿಖಾ ವರದಿಯಲ್ಲಿ ಹೇಳಿದೆ;

7) 2006–07 ರಿಂದ 2014–15ನೇ ಸಾಲುಗಳ ಲೆಕ್ಕ ತನಿಖಾ ವರದಿಯನ್ವಯ ಕಚವಿ ಗ್ರಾಮ ಪಂಚಾಯತ್‌ನಲ್ಲಿ –

ಅ) 2ನೇ ಎದುರುದಾರರು ದಿ:07/03/09 ರಿಂದ 14/05/10 ರವರೆಗೆ & 13/11/11 ರಿಂದ 31/03/2015 ರವರೆಗೆ; ಮತ್ತು

ಆ) 6ನೇ ಎದುರುದಾರರು ದಿ:21/11/06 ರಿಂದ 06/03/2009 ರವರೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ಹಾಗೂ

ಇ) 7ನೇ ಎದುರುದಾರರು ದಿ:01/04/2006 ರಿಂದ 24/09/2007 ರವರೆಗೆ & 24/06/10 ರಿಂದ 22/12/12 ರವರೆಗೆ;

ಈ) 8ನೇ ಎದುರುದಾರರು ದಿ:25/09/2007 ರಿಂದ 10/02/2009 ರವರೆಗೆ;

ಉ) 9ನೇ ಎದುರುದಾರರು ದಿ:11/02/09 ರಿಂದ 23/06/10ರವರೆಗೆ; ಮತ್ತು

ಊ) 10ನೇ ಎದುರುದಾರರು ದಿ:23/12/12 ರಿಂದ 31/03/2015 ರವರೆಗೆ ಪಂಚಾಯತ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ;

8) ಸದರಿ ಖರ್ಚುಗಳ ಪೈಕಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ –

ಅ) 2ನೇ ಎದುರುದಾರರು ಮೇಲಿನ ಉಪ ಖಂಡಿಕೆ–1 (I ರಿಂದ III) ರ ವಸೂಲಾತಿ ಮೊತ್ತ ₹16,07,661/– ಮತ್ತು ಮೇಲಿನ ಉಪ ಖಂಡಿಕೆ–2 (ಕ್ರಮ ಸಂಖ್ಯೆ:1 ರಿಂದ 15, 20 ರಿಂದ 23 & 25)ರ ಮೊತ್ತ ₹3,68,874/– ಗಳಿಗೆ ಒಟ್ಟು ₹19,76,535/–ಗಳಿಗೆ; ಹಾಗೂ

ಆ) 6ನೇ ಎದುರುದಾರರು ಮೇಲಿನ ಉಪ ಖಂಡಿಕೆ–1 (IV & V)ರ ಒಟ್ಟು ವಸೂಲಾತಿ ಮೊತ್ತ ₹31,206/–ಗಳಿಗೆ;

ಹಾಗೂ ಪಂಚಾಯತ್ ಅಧ್ಯಕ್ಷರುಗಳಾದ

ಇ) 9ನೇ ಎದುರುದಾರರು ಮೇಲಿನ ಉಪ ಖಂಡಿಕೆ–1(II)ರ ಕ್ರಮ ಸಂಖ್ಯೆ–1 ಮತ್ತು 2ರ ಒಟ್ಟು ಖರ್ಚು ₹49,450/–ಗಳಿಗೆ;

ಈ) 7ನೇ ಎದುರುದಾರರು ಮೇಲಿನ ಉಪ ಖಂಡಿಕೆ–1(II)ರ ಕ್ರಮ ಸಂಖ್ಯೆ–3 ರಿಂದ 14 ಮತ್ತು ಮೇಲಿನ ಉಪ ಖಂಡಿಕೆ–1(III)ರ ಕ್ರಮ ಸಂಖ್ಯೆ–2 ರಿಂದ 5ರ ಒಟ್ಟು ಖರ್ಚು ₹3,45,679/–ಗಳಿಗೆ;

ಉ) 8ನೇ ಎದುರುದಾರರು ಮೇಲಿನ ಉಪ ಖಂಡಿಕೆ–1(III)ರ ಕ್ರಮ ಸಂಖ್ಯೆ–1ರ ಖರ್ಚು ₹9,087/–ಗಳಿಗೆ; ಮತ್ತು

ಊ) 10ನೇ ಎದುರುದಾರರು ಮೇಲಿನ ಉಪ ಖಂಡಿಕೆ–1(II)ರ 15 ರಿಂದ 67ರ ಒಟ್ಟು ಖರ್ಚು ₹11,64,312/–ಗಳಿಗೆ

ಜವಾಬ್ದಾರರಾಗಿರುವುದರಿಂದ, ಸದರಿಯವರ ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿದೆ;

16. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, 2 ಮತ್ತು 6 ರಿಂದ 10ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

17. ಮೇಲೆ ಹೇಳಿದ ಖರ್ಚುಗಳ ಅವಧಿಯಲ್ಲಿ 1 ಮತ್ತು 3 ರಿಂದ 5ನೇ ಎದುರುದಾರರುಗಳ ಕಚವಿ ಗ್ರಾಮ ಪಂಚಾಯತ್‌ನಲ್ಲಿ ಕರ್ತವ್ಯ ನಿರ್ವಹಿಸಿಲ್ಲವಾದ್ದರಿಂದ, ಸದರಿಯವರುಗಳ ದುರ್ನಡತೆ ಕಂಡು ಬರದಿರುವುದರಿಂದ, ಸದರಿಯವರುಗಳ ವಿರುದ್ಧದ ನಡವಳಿಯನ್ನು ಕೈಬಿಡಲಾಗಿದೆ.

DGM/9627/18



18. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 2 ಮತ್ತು 6 ರಿಂದ 10ನೇ ಎದುರುದಾರರುಗಳು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿದೆ.

19. ಏಳ (7) ರಿಂದ 10ನೇ ಎದುರುದಾರರುಗಳು ಗ್ರಾಮ ಪಂಚಾಯತ್ ಅಧ್ಯಕ್ಷರುಗಳಾಗಿದ್ದರಿಂದ, ಸದರಿಯವರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ದುರುಪಯೋಗ ಮೊತ್ತವನ್ನು ವಸೂಲಿ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿದೆ.

20. ಅದಲ್ಲದೆ, 2 ಮತ್ತು 6ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 6ನೇ ಎದುರುದಾರರು ದಿನಾಂಕ:31/07/2016 ರಂದು ನಿವೃತ್ತಿ ಹೊಂದಿರುವುದರಿಂದ, 6ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು **ಕೆಸಿಎಸ್ ನಿಯಮ** 214(2)(ಬಿ)(i)ರ ಅಡಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಸಕ್ಷಮ ಪ್ರಾಧಿಕಾರವನ್ನು ಕೋರಿದೆ.

21. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 6ನೇ ಎದುರುದಾರರು ದಿನಾಂಕ:31/07/2016 ರಂದು ನಿವೃತ್ತಿ ಹೊಂದಿದ್ದಾರೆ.

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ-1,**
**ಕರ್ನಾಟಕ ರಾಜ್ಯ.**